ಅದಕ್ಕಾಗಿ ಸರ್ಕಾರ ಇದಕ್ಕೆಂದೂ ಒಪ್ಪುವುದಿಲ್ಲ. ಇವರು ಮಾಡುವ ಎಲ್ಲಾ charges ಸತ್ಯಕ್ಕೆ ದೂರವಾದದ್ದು ಎಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅಧ್ಯಕ್ಷರೇ, Horticulture ಬಗ್ಗೆ ಅವರು ಪ್ರಸ್ತಾಪಿಸಿದ್ದಾರೆ, ಅದರ ಬಗ್ಗೆ ನಾವೊಂದು memorandum ಕೊಡುತ್ತಿದ್ದೇವೆ. ಸುಮಾರು 3506 ಕೋಟಿ ರೂ ಲುಕ್ಸಾನಾಗಿದೆ ಎಂದು ಒಂದು estimate ಅವರು ತಯಾರು ಮಾಡಿದ್ದಾರೆ ನಾವು ಕೇಂದ್ರಕ್ಕೆ ಕೊಡುವ memorandum ನಲ್ಲಿ ಈ ತೋಟಗಾರಿಕೆಯಲ್ಲಿ ಆಗಿರುವ ಲುಕ್ಸಾನು ಅದು ತೆಂಗಿನ ಲುಕ್ಸಾನಿರಬಹುದು ಅಥವಾ ಬಿಜಾಪುರದಲ್ಲಾದ ಲುಕ್ಸಾನಿರಬಹುದು ಹಳೇ ಮೈಸೂರಿನಲ್ಲಾದ ತೋಟಗಾರಿಕೆ ಬೆಳೆ ಇರಬಹುದು ಇದರ ಬಗ್ಗೆ ನಾವು separate memorandum ತಯಾರು ಮಾಡಿ ಅವರಿಗೆ ವಿಶೇಷವಾದ ಅನುದಾನ ಕೊಡಿ ಅಂತ ಕೇಳುತ್ತೇವೆ. ಅದು ಬಂದ ಮೇಲೆ ಮುಂದೇನು ಮಾಡಬೇಕೋ ಅದು ಮಾಡುತ್ತೇವೆ. ಇಷ್ಟೊಂದು ಒಳ್ಳೆಯ ಕೆಲಸ ಮಾಡಿದರೂ ಕೂಡ ಅದಕ್ಕೆ ಸ್ಪಂದಿಸುತ್ತಾ ಇಲ್ಲ ಇದೇನು ತೋರಿಸುತ್ತದೆ. ಅಂದರೆ ಕೇವಲ ರಾಜಕೀಯ ಮಾಡಬೇಕೆಂಬ ದೃಷ್ಟಿಯಿಂದ ಹೊರತಾಗಿ ಮತ್ತೇನೂ ಇಲ್ಲ.

ಗೊಂದಲ

ಶ್ರೀ ಜಗದೀಶ ಶೆಟ್ಟರ್ :– ಅಧ್ಯಕ್ಷರೇ, ಬಡ್ಡಿ ಮನ್ನಾ ಮಾಡಲು ತಯಾರಿಲ್ಲ, ಬಡ್ಡಿ ಮನ್ನಾ ಬಗ್ಗೆ ಹೇಳಲಿಲ್ಲ, ಬೆಳೆ ವಿಮೆ ಹಣದ ಬಗ್ಗೆ ಏನೂ ಹೇಳಲಿಲ್ಲ ಆಮೇಲೆ ಸಾಲ ವಸೂಲಾತಿ ನಿಲ್ಲಿಸಲು ಹೇಳಲಿಲ್ಲ. ಇವ್ಯಾವುದಕ್ಕೂ ಇವರು ತಯಾರಿಲ್ಲ ಸದನ ಸಮಿತಿ ರಚನೆಗೆ ತಯಾರಿಲ್ಲ, ಲೋಕಾಯುಕ್ತರ ವರದಿ ಡಿಸ್‌ಕ್ಲೋಸ್ ಮಾಡಲು ತಯಾರಿಲ್ಲ ಕೋಟ್ಯಾಂತರ ರೂ ಭ್ರಷ್ಟಾಚಾರವಾಗಿದೆ ಅದನ್ನು ಮುಚ್ಚಿಡುವಂತಹ ಕೆಲಸ ಮಾಡುತ್ತಿದ್ದಾರೆ. ಇವತ್ತು ಇದು ರೈತ ವಿರೋಧಿ ಸರ್ಕಾರ, ರೈತರನ್ನು ಆತ್ಮಹತ್ಯೆಗೆಳೆದ ರೈತ ವಿರೋಧಿ ಸರ್ಕಾರ, ಇವತ್ತು ಸಾಲ ಮನ್ನಾ ಬಡ್ಡಿ ಮನ್ನಾ ಮಾಡಿರಿ ಎಂದರೂ ತಯಾರಿಲ್ಲ ಒಂದಕ್ಕಾದರೂ ಪರಿಹಾರ ಕೊಡಬೇಕಾಗಿತ್ತಲ್ಲಾ ಒಂದಕ್ಕೂ ಪರಿಹಾರ ಕೊಡಲಿಲ್ಲ ನಾವು ಸಾಕಷ್ಟು ವಿಷಯಗಳನ್ನು ಪ್ರಸ್ತಾಪ ಮಾಡಿದೆವು, ಒಂದಕ್ಕೂ ಪರಿಹಾರ ಕೊಡಲಿಲ್ಲ, ಸರ್ಕಾರ ಸದನ ಸಮಿತಿ ಅಷ್ಟೇ ಅಲ್ಲ, ಬೆಳೆ ವಿಮೆ ಹಣದ ಬಗ್ಗೆ ಏನು ಹೇಳುತ್ತಾರೆ ಹೇಳಲಿಲ್ಲ. ಆಮೇಲೆ ಬಡ್ಡಿ ಮನ್ನಾ ಬಗ್ಗೆ 127 ಕೋಟಿ ರೂ. ಬಡ್ಡಿ ಮನ್ನಾ ಮಾಡಿದ್ದು ಯಾವಾಗ? ಯಾವಾಗ ಆ ಹಣ ಬಿಡುಗಡೆ ಮಾಡುತ್ತೀರಿ? ಮೂರು ತಿಂಗಳೋ? ಬೆಳೆ ವಿಮೆ ಇಲ್ಲ, ಅದರ ಹಣವೂ ಬಿಡುಗಡೆ ಇಲ್ಲ, ಹೀಗಾಗಿ ಇದು ರೈತ ವಿರೋಧಿ ಸರ್ಕಾರ,

(ಈ ಹಂತದಲ್ಲಿ ಬಿಜೆಪಿ ಮತ್ತು ಎಬಿಪಿಜೆಡಿ ಪಕ್ಷಗಳ ಮಾನ್ಯ ಸದಸ್ಯರು ಧರಣಿ ಆರಂಭಿಸುವರು)

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಇನ್‌ಷ್ಯೂರೆನ್ಸ್‌ದ್ದು ನಾವೇನು ಕೊಡಬೇಕೋ ಅದನ್ನು ಕೊಡುತ್ತೇವೆ. ಆದಷ್ಟು ಬೇಗನೆ ಕೊಡುತ್ತೇವೆಂದು ಹೇಳಿದ್ದೇವೆ. ಈಗಾಗಲೇ party ಕೊಟ್ಟಿದ್ದೇವೆ. 33 ಕೋಟಿ ರೂ ಬಡ್ಡೀದು ಕೊಟ್ಟಿದ್ದೇವೆ. ಉಳಿದ ಹಣ ಕೊಡಲು ನಾವು ತಯಾರಿದ್ದು ಹಂತಹಂತವಾಗಿ ಕೊಡುತ್ತೇವೆ.

ಗೊಂದಲ

ಅಧ್ಯಕ್ಷರು :– ಮಾನ್ಯ ಜ್ಞಾನೇಂದ್ರರವರೇ, ನಿಮ್ಮ ನಾಯಕರು ಮಾತನಾಡುವಾಗ ಅವರು ಸುಮ್ಮನೆ ಇದ್ದರು. ಈಗ್ಯಾಕೆ ತಾರತಮ್ಯ ಮಾಡುತ್ತೀರಿ?